ಕಥೆ

# ನಿಶ್ಶೇಷ



**ಪ್ರೇಮಕುಮಾರ್ ಹರಿಯಬ್ಬೆ**

ಕಲೆ: ಸೌಮ್ಯ ಪ್ರಭು ಕಲ್ಯಾಣಕರ್

'ಮುಂಬೈ ಸಹವಾಸ ಸಾಕು, ಊರಿಗೆ ಬಂದು ಸುಮ್ಮನೆ ಇದ್ದು ಬಿಡಬೇಕು ಅನ್ನಿಸ್ತಿದೆ ಎಂದು ಸತ್ಯ ಹೇಳುತ್ತಿರುವಾಗಲೇ ಫೋನ್ ಡಿಸ್‌ಕನೆಕ್ಟ್ ಆಯ್ತು. ಮತ್ತೆ ಮಾಡಬಹುದು ಎಂದು ವಿಶ್ವನಾಥ ಸ್ವಲ್ಪ ಹೊತ್ತು ಕಾದ. ಆದರೆ ಅವನು ಮತ್ತೆ ಫೋನ್ ಮಾಡಿದ್ದು ರಾತ್ರಿ ಹತ್ತೂವರೆ ಹೊತ್ತಲ್ಲಿ. 'ಸಾರಿ ವಿಶ್ವ, ಬೆಳಗ್ಗೆ ಮಾತಾಡ್ತಿರುವಾಗ ಕಾಲ್‌ಡ್ರಾಪ್ ಆಯ್ತು. ಮತ್ತೆ ಮಾಡಬೇಕು ಅಂದುಕೊಂಡರೂ ಬಿಡುವೇ ಸಿಕ್ಕಲಿಲ್ಲ. ಮುಂದಿನ ತಿಂಗಳು ಊರಿಗೆ ಬರ್ತಿದ್ದೀನಿ ಅಂತ ಹೇಳೋಕೆ ಫೋನ್ ಮಾಡಿದ್ದೆ... ಊರಲ್ಲಿ ಐದಾರು ದಿನಗಳು ಇರಬೇಕಾಗಿದೆ' ಎನ್ನುತ್ತ ನಿನಗೊಂದು ವಿಷಯ ಹೇಳಬೇಕು ಎಂದು ಪೀಠಿಕೆ ಹಾಕಿದ.

'ಮೂರು ತಿಂಗಳ ಹಿಂದೆ ನಮ್ಮಣ್ಣನ ಇಬ್ಬರು ಮಕ್ಕಳು ಒಂದೇ ದಿನ ಶೃಂಗೇರಿ ಹತ್ರ ಹೊಳೆಯಲ್ಲಿ ಮುಳುಗಿ ಸತ್ತರು...' ಅಂತ ಹೇಳಿ ಐದಾರು ಸೆಕೆಂಡು ಸುಮ್ಮನಿದ್ದ. 'ಒಂದೇ ದಿನ ಇಬ್ಬರು ಮಕ್ಕಳನ್ನು ಕಳೆದುಕೊಂಡು ಅಣ್ಣ ದಿಕ್ಕೆಟ್ಟು ಕೂತಿದ್ದಾನೆ. ಇನ್ನೂ ಕೆಟ್ಟದ್ದೇನೋ ಆಗುತ್ತೆ ಅನ್ನೋ ಭಯ ಅವನಿಗೆ. ಎರಡು ದಿನಕ್ಕೊಂದ್ಸಲ ಫೋನ್ ಮಾಡಿ ಏನೂ ಆಗಲ್ಲ, ಧೈರ್ಯವಾಗಿರು ಅಂತ ಹೇಳ್ತ ಇದ್ದೀನಿ. ಈಚೆಗೆ ಅವನಿಗೆ ನೆನಪು ಕೈಕೊಡ್ತಿದೆ. ಒಬ್ಬನೇ ಮಾತಾಡಿಕೊಳ್ಳೊಕೆ ಶುರುಮಾಡಿದ್ದಾನಂತೆ! ಕೆಟ್ಟ ಗಳಿಗೆಯಲ್ಲಿ ಏನೋ ಆಗಬಾರದ್ದು ಆಯ್ತು ಅಂದುಕೊಂಡು ಸುಮ್ಮನಿರೋದು ಬಿಟ್ಟು ಮಕ್ಕಳ ಸಾವಿಗೆ ಏನು ಕಾರಣ ಅಂತ ಜೋತಿಷಿಯನ್ನು ಕೇಳಿದನಂತೆ. ಆ ಮಹಾಶಯ ನಿಮ್ಮ ಮಕ್ಕಳ ಸಾವಿಗೆ ಮೂರ್ನಾಲ್ಕು ತಲೆಗಳ ಹಿಂದಿನ ನಿಮ್ಮ ಹಿರಿಯರ ಸಿಟ್ಟು ಕಾರಣ. ಈಗ ಅದು ಶಾಪವಾಗಿ ನಿಮ್ಮನ್ನು ಕಾಡ್ತಿದೆ... ಅಂತ ಹೇಳಿದನಂತೆ.

ಅಣ್ಣನ ಮಕ್ಕಳ ವಯಸ್ಸು ನಲವತ್ತರ ಮೇಲಾಗಿತ್ತು. ಇಬ್ಬರಿಗೂ ಮಕ್ಕಳಿದ್ದಾರೆ. ಸಂಬಂಧಿಕರ ಮನೆಯಲ್ಲಿ ಏನೋ ಫಂಕ್ಷನ್ನು ಅಂತ ಶೃಂಗೇರಿಗೆ ಹೋಗಿದ್ದರಂತೆ. ಹೊಳೆಯಲ್ಲಿ ನೀರು ನೋಡಿ ಈಜೋಕೆ ಇಳಿದರಂತೆ. ಮೇಲಿಂದ ಪ್ರವಾಹ ಬಂದು ಕೊಚ್ಚಿ ಹೋದರು. ಮೂರು ದಿನ ಕಳೆದ ಮೇಲೆ ಮುಂದೆಲ್ಲೋ ಹೆಣವಾಗಿ ಪತ್ತೆಯಾದರು. ಗುರುತು ಹಿಡಿಯೋಕೆ ಆಗದಷ್ಟು ವಿಕಾರವಾಗಿದ್ದ ಮಕ್ಕಳ ಹೆಣಗಳನ್ನು ನೋಡಿ ಅಣ್ಣ ಪ್ರಜ್ಞೆ ತಪ್ಪಿದ್ದ. ತುಂಬಾ ದಿನಗಳು ಹಾಸಿಗೆ ಹಿಡಿದು ಮಲಗಿದ್ದ. ಈಗ ಸ್ವಲ್ಪ ಚೇತರಿಸಿಕೊಂಡಿದ್ದಾನೆ. ಅವನಿಗೆ ಉಳಿದಿರೋನು ಜೀವರಾಜ ಅನ್ನೋ ಕೊನೇ ಮಗ. ಅವನಿಗೆ ಸ್ವಲ್ಪ ಮೆಂಟಲ್ ಸಮಸ್ಯೆ ಇದೆ. ಅವನಿಗೂ ಏನಾದರೂ ಆಗಿಬಿಡುತ್ತೆ ಅನ್ನೋ ಭಯ'.

'ನಮ್ಮ ಹಿರಿಯರೇ ನಮಗೆ ಶಾಪ ಕೊಟ್ಟರಲ್ಲ. ಸಿಟ್ಟನಲ್ಲಿ ಯಾರಾದರೂ ನೀವು ಹಾಳಾಗಿ ಹೋಗಿ ಅಂತ ಬೈದಿರಬಹುದು. ಅದು ಖಂಡಿತಾ ಶಾಪ ಅಲ್ಲ. ನೀನು ಜೋತಿಷಿಯ ಮಾತು ಕೇಳಿ ಹೆದರಿದ್ದೀಯ.